ಸಿ.ಸಿ. ನಂಬ್ರ: 1982/2014 ಪ್ರಾಸಾ:3

ದಿನಾಂಕ: 01.08.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ: ಮಾನ್ಯ ವಿಶೇಷ ಸ.ಸ.ಅ.ರವರಿಂದ: ದಿ: 19-07-2025ರ ಆದೇಶದಂತೆ:**

ಸದ್ರಿ ದಿನ ಗಾಯಾಳುವಿಗೆ ಚಿಕಿತ್ಸೆ ನೀಡಿದ ನಂತರ ಆಕೆಯನ್ನು ಶಸ್ತ್ರ ಚಿಕಿತ್ಸಾ ತಜ್ಞರಿಗೆ ಕಳುಹಿಸಿ ಕೊಟ್ಟಿರುತ್ತೇನೆ. ಕಾರಣ ಆಕೆಯ ತಲೆಯ ಎಡಭಾಗದಲ್ಲಿ 2x1c.mನ ಹರಿದ ಗಾಯ ಕಂಡು ಬಂದಿರುತ್ತದೆ. ಸದ್ರಿ ದಿನ ಚಾಸಾ-1 ರವರು ಆಸ್ಪತ್ರೆಗೆ ಹಾಜರಾಗಿದ್ದಾಗ ನಾನು ಕರ್ತವ್ಯದಲ್ಲಿ ಇದ್ದ ವೈದ್ಯಾಧಿಕಾರಿಯಾಗಿದ್ದೆ.

**ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:**

ಸದ್ರಿ ದಿನ ನಾನು ಕ್ಯಾಜುವೆಲಿಟಿಯಲ್ಲಿ ಇದ್ದು ಗಾಯಾಳುವಿಗೆ ಚಿಕಿತ್ಸೆ ನೀಡಿರುತ್ತೇನೆ. ಶಸ್ತ್ರ ತಜ್ಞ ವೈದ್ಯಾಧಿಕಾರಿಯವರು ನಾನು ಕೊಟ್ಟ ಗಾಯಗಳ ವಿವರಣೆಯ ಆಧಾರದ ಮೇಲೆ ಚಿಕಿತ್ಸೆ ನೀಡಿರುತ್ತಾರೆ. ನಿಪಿ-3ನ್ನು ತನಿಖಾಧಿಕಾರಿಯವರಿಗೆ ವಿತರಿಸುವ ಮೊದಲು ಚಿಕಿತ್ಸೆಯ ಬಗ್ಗೆ ವರದಿಯನ್ನು ಪರಿಶೀಲಿಸಿ ವಿತರಿಸಿರುತ್ತೇನೆ. ಚಿಕಿತ್ಸೆಯ ಬಗ್ಗೆ ಇದ್ದ ವರದಿಯನ್ನು ಪರಿಪೂರ್ಣವಾಗಿ ಪರಿಶೀಲಿಸಿರುತ್ತೇನೆ. ನಿಪಿ-3 ರಂತೆ ಅದು ಸಾಮಾನ್ಯ ಸ್ವರೂಪದ ಗಾಯವಾಗಿ ಕಂಡು ಬಂದಿರುತ್ತದೆ ಎಂದರೆ ಸರಿ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ